**Application No:**
ಅರ್ಜಿ ಸಂಖ್ಯೆ:

# ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ

# KARNATAKA STATE DR. GANGUBAI HANAGAL MUSIC AND PERFORMING ARTS UNIVERSITY, MYSURU

## 2022–23 ನೇ ಸಾಲಿನ ಡಿ.ಲಿಟ್., ಕೋರ್ಸಿಗೆ ಪ್ರವೇಶ ಅರ್ಜಿ

## Application Form for Admission for D.Lit., Course 2022-23

ಸೂಚನೆ : 1. ಎಲ್ಲಾ ಅಭ್ಯರ್ಥಿಗಳ ಅರ್ಜಿಯನ್ನು ಸಾಮಾನ್ಯ ಪ್ರವೇಶಾತಿಯ ಅಡಿಯಲ್ಲಿ ಪರಿಗಣಿಸಲಾಗುವುದು.

Note : 1. All applications will be considered for admission under Entrance Examination.

| | | |
|---|---|---|
| 1 | ಹೆಸರು<br>**Name** | |
| 2 | ಜನನ ದಿನಾಂಕ / ಸ್ಥಳ:<br>**Date of Birth / Place** | |
| 3 | ವಿಳಾಸ/ **Address**<br><br>ದೂರವಾಣಿ ಸಂಖ್ಯೆ:<br>**Telephone No:** | |
| 4 | ಮೀಸಲಾತಿ ವಿವರ (ಪ್ರಮಾಣ ಪತ್ರ ಲಗತ್ತಿಸಿರಿ) :<br>**Particulars of Reservation (Enclosed Certificate)** | |
| 5 | ಶೈಕ್ಷಣಿಕ ಅರ್ಹತೆಗಳು (ವಿವರಗಳು ಅಡಕ ಹಾಳೆಯಲ್ಲಿ) :<br>**Educational Qualification (Details in the enclosure) :** | |
| 6 | ಇದುವರೆಗಿನ ಸಾಧನೆ ಗ್ರಂಥಗಳು, ಲೇಖನಗಳು, ಪ್ರದರ್ಶನಗಳು, ಪ್ರಶಸ್ತಿಗಳು ಇತ್ಯಾದಿ ( ಪ್ರತ್ಯೇಕವಾದ ಹಾಳೆಯಲ್ಲಿ ಬರೆದು, ಮೂರು ಪ್ರತಿಗಳನ್ನು ಲಗತ್ತಿಸಬೇಕು)<br>**Achievements like Books, Articles, Performances, Awards etc., (Write in a separate paper and enclose three copies of the same)** | |
| 7 | ಡಿ.ಲಿಟ್ ಗಾಗಿ ಸಿದ್ಧಪಡಿಸಲು ಉದ್ದೇಶಿಸಿರುವ ನಿಬಂಧದ ಶಿರ್ಷಿಕೆ ( ಈ ವಿಷಯವನ್ನು ಕುರಿತ ವಿವರವಾದ ಪ್ರಸ್ತಾವನೆಯನ್ನು ಐದು ಪ್ರತಿಗಳಲ್ಲಿ ಲಗತ್ತಿಸಬೇಕು).<br>**Title of the thesis for D.Lit (5 Copies of the detailed proposal to be enclosed)** | |
| 8 | ಡಿ.ಲಿಟ್., ಪ್ರಸ್ತಾವನೆ ಸಲ್ಲಿಕೆ / ಅರ್ಜಿ ಶುಲ್ಕ ವಿವರ : (ಸಾಮಾನ್ಯ / ಹಿಂದುಳಿದ ವರ್ಗದವರಿಗೆ ರೂ. 1500/- ಗಳ ಪ.ಜಾ / ಪ.ಪಂ ವರ್ಗದವರಿಗೆ ರೂ.750/- ಡಿ.ಡಿ.ಯನ್ನು ಹಣಕಾಸು ಅಧಿಕಾರಿಗಳು, ಕೆಎಸ್‌ಜಿಹೆಚ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು ಇವರ ಹೆಸರಿನಲ್ಲಿ ಎಸ್.ಬಿ.ಐ, ಮೈಸೂರು ಶಾಖೆಗೆ ಜಮಾ ಆಗುವಂತೆ ಪಡೆದಿರಬೇಕು). | |

| | | |
|---|---|---|
| | **Details of Fees Paid : GM and OBC (D.D. for Rs.1500/-, SC/ST Rs.750/- in favor of Finance officer, KSGH Music and Performing Arts University, Mysore, Payable at SBI, Mysore)**<br>ಮೊತ್ತ/**Amount:** | |
| 9 | ಡಿ.ಡಿ.ಸಂಖ್ಯೆ ಮತ್ತು ದಿನಾಂಕ:<br>**D.D.No. and Date:**<br>(ದಯವಿಟ್ಟು ಡಿ.ಡಿ.ಯನ್ನು ಅರ್ಜಿಯೊಂದಿಗೆ ಲಗತ್ತಿಸಿ)<br>**(Please enclose D.D with application)** | |
| 10 | ನಿಮ್ಮ ಬಗ್ಗೆ ಶಿಫಾರಸ್ಸು ಪತ್ರ ನೀಡಬಲ್ಲ ಇಬ್ಬರು ವಿದ್ವಾಂಸರ ಹೆಸರು ಮತ್ತು ವಿಳಾಸ<br>**Name and Address of the two scholars who are recommending you** | |

## ಘೋಷಣೆ

1. ನಾನು ಡಿ.ಲಿಟ್. ಕೋರ್ಸಿಗೆ ಈ ಅರ್ಜಿ ಸಲ್ಲಿಸುತ್ತಿದ್ದೇನೆ. ಈ ಸಂಬಂಧ ಪ್ರವೇಶ ನಿಯಮಾವಳಿಗಳನ್ನು ಓದಿಕೊಂಡಿದ್ದೇನೆಂದು ಘೋಷಿಸುತ್ತೇನೆ.
2. ಮೇಲೆ ನೀಡಿದ ಹೇಳಿಕೆ ಮತ್ತು ನನ್ನ ಅರ್ಜಿ ಹಾಗೂ ಅದಕ್ಕೆ ಲಗತ್ತಿಸಿರುವ ದಾಖಲೆಗಳಲ್ಲಿ ಒದಗಿಸಿರುವ ಮಾಹಿತಿಗಳು ನಿಜವಾಗಿವೆ ಎಂದು ಪ್ರಮಾಣ ಪೂರ್ವಕವಾಗಿ ದೃಢೀಕರಿಸುತ್ತೇನೆ. ಇಲ್ಲಿ ಒದಗಿಸಿರುವ ಮಾಹಿತಿಗಳಲ್ಲಿ ಸುಳ್ಳಾಗಿರುವುದು ಕಂಡು ಬಂದರೆ, ನಾನು ಕಾನೂನು ಕ್ರಮಕ್ಕೆ ಒಳಗಾಗುತ್ತೇನೆ ಮತ್ತು ನನಗೆ ನೀಡಿರುವ ಪ್ರವೇಶವನ್ನು ರದ್ದುಪಡಿಸಲಾಗುವುದು ಎಂಬುದನ್ನು ನಾನು ಅರಿತಿದ್ದೇನೆ.

## DECLARATION

1. I submit this application seeking admission for a D.Lit Course. I declare that I have read the rules and regulations in this regard.
2. I hereby solemnly affirm that the statement made and information furnished in my application form and also in the enclosures there to submit by me is true. Should it, however, be found that any information furnished herein is untrue. I realize that I am liable to criminal prosecution and the seat given to me shall be liable to be forfeited.

ದಿನಾಂಕ :

**Date:**

ಅಭ್ಯರ್ಥಿಯ ಸಹಿ

**Signature of Candidate**

ಸ್ಥಳ :

**Place:**

# 2022–23 ನೇ ಸಾಲಿನ ಡಿ.ಲಿಟ್ ಪದವಿ ನಿಯಮಾವಳಿ

- ಪ್ರವೇಶಾರ್ಹತೆ:

- ಭಾರತೀಯ ಮತ್ತು ಕರ್ನಾಟಕ ಕಲಾ ಪರಂಪರೆ ಮತ್ತು ಸಮಸ್ಕೃತಿಯ ಅಧ್ಯಯನವನ್ನು ವಿಶ್ವವಿದ್ಯಾಲಯವು ಪ್ರೋತ್ಸಾಹಿಸುತ್ತದೆ. ಸಂಗೀತ, ನೃತ್ಯ, ನಾಟಕ ಮತ್ತು ಇತರ ಪ್ರದರ್ಶಕ ಕಲೆಗಳಲ್ಲಿ ಹಾಗೂ ಅಂತರ್‌ಶಿಸ್ತೀಯ ವಿಷಯಗಳಲ್ಲಿ ಅರಿವುಳ್ಳವರ ಮತ್ತು ಅಧ್ಯಯನ ನಡೆಸಿ ಈಗಾಗಲೇ ಗಮನಾರ್ಹ ಕೊಡುಗೆ ನೀಡಿದ ಅಭ್ಯರ್ಥಿಗಳಿಗೆ ಡಿ.ಲಿಟ್ ಅಧ್ಯಯನಕ್ಕೆ ವಿಶೇಷ ಪ್ರವೇಶ ನೀಡುತ್ತದೆ. ಅಭ್ಯರ್ತಿಗಳು ಸ್ವತಂತ್ರವಾಗಿ ಅಧ್ಯಯನ ಮಾಡಲು ಸಮರ್ಥರಿದ್ದು ಈಗಾಗಲೇ ಮೌಲಿಕ ಸಂಶೋಧನೆ ಲೇಖನ/ಗ್ರಂಥಗಳನ್ನು ಪ್ರಕಟಿಸಿರಬೇಕು. ಅಂತಹ ಅಭ್ಯರ್ಥಿಗಳು ತಮ್ಮ ನಿರ್ದಿಷ್ಟ ಕ್ಷೇತ್ರದಲ್ಲಿ ಹೊಂದಿದ ತಿಳುವಳಿಕೆ ಹಾಗೂ ಸಾಧನೆಯ ಕುರಿತು ಅಗತ್ಯ ಪ್ರಸ್ತಾವವನ್ನು ಅರ್ಜಿಯೊಂದಿಗೆ ಒದಗಿಸುವುದು. / The Karnataka State Dr.Gangubai Music and performing Arts University, Mysore. Encourages the study and researches on our India culture and tradition on various genres like Music, Dance, Drama and other performing arts and interdisciplinary subjects by providing admission to the D.Litt. Degree by the University Candidate means any eligible candidate for the degree. Fee means fee prescribed by the University for the Degree offered. Degree D.Litt. degree of this university. Candidates should be able to work independently and should have published research articles or books. Such candidates can submit their consistent research work in their respective fields with their application.

- ಡಿ.ಲಿಟ್ ಪದವಿಗೆ ಪ್ರವೇಶ ಕೋರುವ ವಿದ್ಯಾರ್ಥಿಗಳು ವಿಶ್ವವಿದ್ಯಾಲಯ ನಡೆಸುವ ಪ್ರವೇಶ ಪರೀಕ್ಷೆಯಲ್ಲಿ ಪ್ರಾತ್ಯಕ್ಷಿತೆ ಹಗೂ ಮೌಖಿಕ ಪರೀಕ್ಷೆಗೆ ಒಳಪಡಬೇಕು. ಪ್ರಾತ್ಯಕ್ಷಿಕೆ ಪರೀಕ್ಷೆಗೆ 100 ಅಂಕಗಳು ಮತ್ತು ಮೌಖಿಕ ಪರೀಕ್ಷೆ 100 ಅಂಕಗಳನ್ನು ಒಟ್ಟು 200 ಅಂಕಗಗಳು ನಿಗದಿಪಡಿಸಲಾಗಿದೆ. ತೇರ್ಗಡೆಯಾಗಲು ಕನಿಷ್ಠ 55% (ಸಾ.ಅ) ಕನಿಷ್ಠ 50% (ಪ.ಜಾ/ಪ.ಪಂ) ಅಂಕಗಳನ್ನು ಪಡೆಯಬೇಕು. / Candidates should attend Oral examination containing 100 marks; presentation of lecture contains 100 marks Total 200 marks. To pass every exam minimum 55% (GM) and 50% (SC/ST) to be obtained.

- ಮೌಲ್ಯಮಾಪನ ಸಮಿತಿಯು ಸಕಾರಾತ್ಮಕ ವರದಿಯನ್ನು ನೀಡಿದ ಅನಂತರ ಅಭ್ಯರ್ಥಿಯು ಉತ್ತೀರ್ಣಗೊಂಡ ಬಳಿಕ ಸಮಿತಿಯು ತನ್ನ ಶಿಫಾರಸ್ಸನ್ನು ಮುಂದಿನ ಕ್ರಮಕ್ಕಾಗಿ ಕುಲಸಚಿವರು (ಪರೀಕ್ಷಾಂಗ) ಇವರಿಗೆ ಸಲ್ಲಿಸಬೇಕಾಗುತ್ತದೆ. ಅನಂತರ ಕುಲಸಚಿವರು (ಪರೀಕ್ಷಾಂಗ) ಇವರು ಸಮಿತಿಯ ಶಿಫಾರಸ್ಸನ್ನು ಕುಲಪತಿಗಳ ಅನುಮೋದನೆಗೆ ಸಲ್ಲಿಸುತ್ತಾರೆ. ಕುಲಪತಿಗಳ ಅನುಮೋದನೆ ಪಡೆದ ಬಳಿಕ ವಿಶ್ವವಿದ್ಯಾಲಯವು ಡಿ.ಲಿಟ್ ಪದವಿಯನ್ನು ನೀಡುವ ಕುರಿತು ಅಧಿಸೂಚನೆಯನ್ನು ಪ್ರಕಟಿಸುವುದು. / If the Evaluation Committee gives positive reports based on the marks, the marks, the Registrar (Evaluation) will submit the report recommended by the Committee to the Vice-Chancellor for approval. Synopsis of the candidates who have passed the entrance examination will be scrutinized by the three member's expert committee constituted by the Vice-Chancellor. The University will accept the recommendation made by the expert committee.

- **ನೋಂದಣಿ ವಿಧಾನ:**

ಪ್ರಸ್ತಾವವು ಅಧ್ಯಯನದ ಉದ್ದೇಶ, ವ್ಯಾಪ್ತಿ ಹಾಗೂ ಮಹತ್ವಗಳ ಕುರಿತು ಸ್ಪಷ್ಟ ವಿವರಗಳಿಂದ ಕೂಡಿರಬೇಕು. ಅಧ್ಯಯನಕಾರರಿಗೆ ವಿಷಯದ ಬಗ್ಗೆ ಆಳವಾದ ಅರಿವು ಇದೆ ಎಂಬುದನ್ನು ಸಾರಲೇಖದ ಪ್ರಸ್ತಾವವು ಖಚಿತ ಪಡಿಸುವಂತಿರಬೇಕು. ಅಂಥ ಪ್ರಸ್ತಾವದ 8 ಪ್ರತಿಗಳನ್ನು ಅಭ್ಯರ್ಥಿಯು ಸಲ್ಲಿಸಬೇಕು. / Thereafter candidates should have to submit their proposals of 8 copies to the Doctoral committee consisting of high level experts. If the said committee approves the

research proposal, such candidate will be considered for registration after obtaining the Vice-Chancellor.

- ಅಭ್ಯರ್ಥಿಗಳು ಸಲ್ಲಿಸಿದ ಸಂಬಂಧಿತ ವಿಷಯದ ಸಾರಲೇಖದ ಪ್ರಸ್ತಾವವನ್ನು ಮೂರು ತಿಂಗಳೊಳಗೆ ವಿಶ್ವವಿದ್ಯಾಲಯದ ಪರಿಶೀಲನ ಸಲಹಾ ಸಮಿತಿಯು ಮೂವರು ಬಾಹ್ಯ ತಜ್ಞರಿಗೆ ಕಳುಹಿಸಿ ಅವರ ಶಿಫಾರಸ್ಸಿನ ಮೇರೆಗೆ ಪ್ರಸ್ತಾವವನ್ನು ಒಪ್ಪಿಕೊಳ್ಳುತ್ತದೆ. / Depending upon the Evaluation of synopsis submitted by the candidate by the three external expert committee recommendations university will approve the synopsis within three months of the submission.

- ಪರಿಶೀಲನ ಸಲಹಾ ಸಮಿತಿ:-

  ಮಾನ್ಯ ಕುಲಪತಿಗಳು / **Hon. Vice-Chancellor**

  ಕುಲಸಚಿವರು / **Registrar**

  ಕುಲಸಚಿವರು (ಮೌಲ್ಯಮಾಪನ) / **Registrar (Evaluation)**

  ವಿಷಯಕ್ಕೆ ಸಂಬಂಧಿಸಿದ ಇಬ್ಬರು ಬಾಹ್ಯ ವಿದ್ವಾಂಸರು / ವಿಷಯ ಪರಿಣಿತರು ಮತ್ತು ಅಧ್ಯಯನ ಮಂಡಳಿ ಅಧ್ಯಕ್ಷರು. / **Two external subject experts / Subject experts and Doctoral committee.**

- ಅನಂತರ ಅಭ್ಯರ್ಥಿಗಳು ತಮ್ಮ ಪ್ರಸ್ತಾವವನ್ನು ಉನ್ನತ ಮಟ್ಟದ ವಿದ್ವಾಂಸರಿರುವ ಡಾಕ್ಟರಲ್ ಸಮಿತಿಯ ಮುಂದೆ ಮಂಡಿಸಬೇಕಾಗುತ್ತದೆ. ಈ ಸಮಿತಿಯ ಒಪ್ಪಿಗೆ ಸೂಚಿಸಿದ ಬಳಿಕ ಕುಲಪತಿಗಳ ಅನುಮೋದನೆ ಪಡೆದು ಡಿ.ಲಿಟ್ ಪದವಿಗೆ ನೋಂದಾವಣೆ ಮಾಡಿಕೊಳ್ಳಲಾಗುತ್ತದೆ. ನೋಂದಣಿಯನ್ನು ನೀಡುವ ಅಥವಾ ನೀಡದಿರುವ ಅಧಿಕಾರವು ವಿಶ್ವವಿದ್ಯಾಲಯಕ್ಕೆ ಇರುತ್ತದೆ. ಪ್ರತಿ ನಿಕಾಯದಲ್ಲಿ ಸ್ಥಾನ ತೆರವಾದಂತೆ ಕ್ರಮವಾಗಿ ಅದನ್ನು ತುಂಬಲಾಗುವುದು. / Thereafter candidates should have to submit their proposals to the Doctoral committee consisting of high level experts. If the said committee approves the research proposal, such candidate will be considered for registration after obtaining the orders of the Vice-Chancellor.

## ಇ. ಅಧ್ಯಯನ ಅವಧಿ:

- ನೋಂದಣಿಯಾದ ದಿನಾಂಕದಿಂದ ಎರಡು ವರ್ಷಗಳ ಕಾಲ ಅಭ್ಯರ್ಥಿಗಳು ಸಂಶೋಧನೆಯನ್ನು ನಡೆಸಿ ಆರು ತಿಂಗಳಿಗೊಮ್ಮೆ ಸಂಶೋಧನೆ ಕುರಿತು ಪ್ರಗತಿ ವರದಿಯನ್ನು ವಿಶ್ವವಿದ್ಯಾಲಯದ ಪರೀಕ್ಷಾಂಗ ವಿಭಾಗಕ್ಕೆ ನಿಗದಿತ ಶುಲ್ಕದೊಂದಿಗೆ ಸಲ್ಲಿಸುವುದು. ಪ್ರಗತಿ ವರದಿಯನ್ನು ಪರಿಶೀಲನೆ ಸಲಹಾ ಸಮಿತಿ ಮುಂದೆ ಮಂಡಿಸುವುದು ಕಡ್ಡಾಯ. ಅಧ್ಯಯನವು ಕ್ರಮಬದ್ಧ ಹಾಗೂ ತೃಪ್ತಿಕರ ಎಂದು ಕಂಡುಬಂದಿದ್ದಲ್ಲಿ ಆ ಸಮಿತಿಗೆ ನೋಂದಣಿಯನ್ನು ರದ್ದುಗೊಳಿಸುವ ಹಕ್ಕು ಇರುತ್ತದೆ. ಎರಡು ವರ್ಷಗಳು ತುಂಬಿದ ಬಳಿಕ ಕೃತಿಚೌರ್ಯ ತಪಾಸಣೆಗೆ ಒಳಪಟ್ಟ ಸಿದ್ಧಪಡಿಸಿದ ಪ್ರಬಂಧವನ್ನು ಕುಲಸಚಿವರು (ಪರೀಕ್ಷಾಂಗ) ಇವರಿಗೆ ಸಲ್ಲಿಸುವುದು. / Candidates have to work on research for two years and submit the research progress report for every six months to the Registrar Evaluation along with prescribed fees. Thesis should be submitted within five years from the date of registration. The candidate is required to submit the thesis as his/her original Research work with the plagiarism check by the university with prescribed fee.

- ಈ ಪ್ರಬಂದವನ್ನು ಮೌಲ್ಯಮಾಪನ ಮಾಡಲು ಅರ್ಹ ವಿದ್ವಾಂಸರಿರುವ ಉನ್ನತಮಟ್ಟದ ಸಮಿತಿಯೊಂದನ್ನು ಅಧ್ಯಯನ ಮಂಡಳಿಯು ರೂಪಿಸಿ ಮಾನ್ಯ ಕುಲಸಚಿವರು (ಪರೀಕ್ಷಾಂಗ) ಇವರಿಗೆ ಸಲ್ಲಿಸುವುದು. ಕುಲಸಚಿವರು (ಮೌಲ್ಯಮಾಪನ) ಇವರು ಅಧ್ಯಯನ ಮಂಡಳಿ ಸಲ್ಲಿಸಿದ ಪಟ್ಟಿಯಿಂದ 12 ಜನ ವಿದ್ವಾಂಸರ ಪಟ್ಟಿಯನ್ನು ಕುಲಪತಿಗಳಿಗೆ ಸಲ್ಲಿಸುವುದು. ಕುಲಪತಿಗಳು ಸೂಚಿಸಿ ಯಾರಾದರೂ ಮೂವರು ವಿದ್ವಂಸರುಇಗೆ ಅಧ್ಯಯನ ಪ್ರಬಂಧವನ್ನು ಕಳುಹಿಸಿ ಕೊಡಲಾಗುವುದು. ಪ್ರಬಂಧವು ಉನ್ನತ ಮಟ್ಟದ ಸಂಶೋಧನ ಮಹತ್ವವನ್ನು ಪಡೆದಿದೆಯೆಂದೂ, ಸಂಬಂಧಿತ ಜ್ಞಾನಕ್ಷೇತ್ರದ ವಿಸ್ತರಣೆ ಕಾರಣವಾಗಿದೆಯೆಂದೂ ಮೌಲ್ಯಮಾಪಕರು ತೀರ್ಮಾನಿಸಿದಲ್ಲಿ ಮಾತ್ರ ಅದನ್ನು ಡಿ.ಲಿಟ್ ಪದವಿಗೆ ಪರಿಗಣಿಸಲಾಗುವುದು. ಮೌಲ್ಯಮಾಪಕರಿಗೆ

ಅಧ್ಯಯನಕಾರರ ಅಂತಿಮ ಸಾರಲೇಖವನ್ನು ಕಳುಹಿಸಿ ಮೌಲ್ಯಮಾಪನಕ್ಕೆ ಅವರ ಒಪ್ಪಿಗೆ ಪಡೆಯಬೇಕು. ಮೌಲ್ಯಮಾಪಕರ ಒಪ್ಪಿಗೆ ಬಂದ ನಂತರ ಮಹಾಪ್ರಬಂಧವನ್ನು ಮೌಲ್ಯಮಾಪನಕ್ಕೆ ಕಳುಹಿಸಬಾಕು. ಮೌಲ್ಯಮಾಪನ ಮಾಡುವ ಮೌಲ್ಯಮಾಪಕರಿಗೆ ಕನಿಷ್ಠ 1 ತಿಂಗಳಿಂದ ಗರಿಷ್ಠ 2 ತಿಂಗಳ ಕಾಲಾವಧಿಯನ್ನು ನೀಡಬೇಕು. / To evaluate the thesis submitted by the candidates a committee consisting of twelve experts will be constituted by the Registrar (Evaluation). The Vice-Chancellor will select scholars among the said experts and the thesis will be sent for evaluation. The three members of the Evaluation committee should submit individual evaluation report to the chairman/Registrar (Evaluation). If the Research thesis is rejected from any one of the Evaluators, it will be consented from the fourth evaluator. Among the three evaluators if any evaluator rejects the thesis, candidate will have a chance to resubmit with payment of prescribed fees after verification. Maximum time of one to two months will be given to the Evaluators.

- ಮೌಲ್ಯಮಾಪನ ಸಮಿತಿಯ ಮೂವರು ಸದಸ್ಯರು ಪ್ರತ್ಯೇಕವಾಗಿ ತಮ್ಮ ಮೌಲ್ಯಮಾಪನ ವರದಿಯನ್ನು ಅಧ್ಯಯನ ಮಂಡಳಿಯ ಅಧ್ಯಕ್ಷರು/ ಕುಲಸಚಿವರು (ಪರೀಕ್ಷಾಂಗ) ಇವರಿಗೆ ಸಲ್ಲಿಸುತ್ತಾರೆ. ಮೌಲ್ಯಮಾಪಕರಲ್ಲಿ ಯಾರಾದರೊಬ್ಬರು ಪ್ರಬಂಧವನ್ನು ತಿರಸ್ಕರಿಸಿದ ಪಕ್ಷದಲ್ಲಿ, ನಾಲ್ಕನೆಯ ವಿದ್ವಾಂಸರಿಗೆ ಅದನ್ನು ಪರಿಗಣಿಸಲಾಗುತ್ತದೆ. ನಾಲ್ಕನೆಯ ವಿದ್ವಾಂಸರು ಕೂಡಾ ತಿರಸ್ಕರಿಸಿದಲ್ಲಿ ಪ್ರಬಂಧವನ್ನು ಡಿ.ಲಿಟ್ ಪದವಿಗೆ ಪರಿಗಣಿಸಲಾಗುವುದಿಲ್ಲ. ಹಾಗಿದ್ದಲ್ಲಿ ಅಭ್ಯರ್ಥಿಯು ನಿಗದಿತ ಶುಲ್ಕದೊಂದಿಗೆ ಪುನರ್ ಸಲ್ಲಿಸಲು ಅವಕಾಶವಿರುತ್ತದೆ. / The three members of the Evaluation committee should submit individual evaluation report to the chairman/ Registrar (Evaluation). If the Research thesis is rejected from any one of the Evaluators, it will be consented from the fourth evaluator. Among the three evaluators if any evaluator rejects the thesis, candidate will have a chance to resubmit with payment of prescribed fees after verification the thesis will be submitted the fourth evaluator, if the fourth evaluator rejects. Thesis degree will not be awarded. And the thesis evaluators advises to modify the thesis, then the thesis will be sent to the same evaluator for evaluation after modification is done by the candidate observing the formalities with prescribed fee.

- ಮೂರು ಜನರನ್ನು ಒಳಗೊಂಡ ಪರೀಕ್ಷಕರ ಸಮಿತಿಯಲ್ಲಿ ಯಾರಾದರೊಬ್ಬರು, ಪ್ರಬಂಧದಲ್ಲಿ ಬದಲಾವಣೆಗಳನ್ನು ಮಾಡಲು ಸೂಚಿಸಿದರೆ ಅಭ್ಯರ್ಥಿಯು ತನ್ನ ಪ್ರಬಂಧದಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಿ ಸಲ್ಲಿಸಬೇಕು ಹಾಗೂ ಸಲ್ಲಿಸಿದ ಪ್ರಬಂಧವನ್ನು ಮರು ಮೌಲ್ಯಮಾಪನಕ್ಕಾಗಿ ಅದೇ ಮೌಲ್ಯಮಾಪಕರಿಗೆ ಕಳುಹಿಸಲಾಗುತ್ತದೆ. / Among the three evaluators, if any one of the evaluators advises to modify the thesis, then the thesis will be sent to the same evaluator for evaluation for after modification is done by the candidate observing the formalities.

- ಅಧ್ಯಯನ ಪ್ರಬಂಧವನ್ನು ಸಲ್ಲಿಸುವ ಅಭ್ಯರ್ಥಿಯು ವಿಶ್ವವಿದ್ಯಾಲಯದಲ್ಲಿ ತಮ್ಮ ಅಧ್ಯಯನದ ಪ್ರಗತಿಯನ್ನು ಕುರಿತು ವಿಶೇಷ ಉಪನ್ಯಾಸ ನೀಡಬೇಕು ಹಾಗೂ ಪರಿಶೀಲನಾ ಸಮಿತಿಯ ಮುಂದೆ ಪ್ರಗತಿಯ ಕುರಿತಂತೆ ಮೌಖಿಕ ಪರೀಕ್ಷೆಗೆ ಹಾಜರಾಗುವುದು. ಇದೂ ಸಹ ಮೌಲ್ಯಮಾಪನದ ಒಂದು ಭಾಗವಾಗಿರುತ್ತದೆ. ಮೌಖಿಕ ಪರೀಕ್ಷೆಗೆ 3 ಮೌಲ್ಯಮಾಪಕರಲ್ಲಿ ಒಬ್ಬರನ್ನು ಅಗತ್ಯವಾಗಿ ಆಹ್ವಾನಿಸಬೇಕು. ಮೌಖಿಕ ಪರೀಕ್ಷಾ ಮಂಡಳಿ ಶಿಫಾರಸ್ಸಿನ ಮೇರೆಗೆ ಕುಲಪತಿಗಳು ಪ್ರಾಧಿಕಾರಗಳಲ್ಲಿ ಮಂಡಿಸುವ ಮೂಲಕ ಡಿ.ಲಿಟ್ ಪದವಿಯನ್ನು ಘೋಷಿಸುತ್ತಾರೆ. / Wherever the University invites the candidates, he/she should come to the University and give a lecture on the Research thesis. Oral exam before the expert committee also will be a part of Evaluation. The University will constitute three members evaluation committee in the final colloquium. After the recommendations of the committee. The Vice-Chancellor will award the Degree before the committee.

- ಪ್ರತಿವರ್ಷ ನಿಕಾಯವಾರು ಗರಿಷ್ಠ 5 ವಿದ್ಯಾರ್ಥಿಗಳಿಗೆ ಅರ್ಹತೆ ಆಧಾರದ ಮೇಲೆ ಪ್ರವೇಶ ಕೊಡಬಹುದು. / On the basis of eligibility criteria, maximum of five candidates are permitted for the admission every year under each faculty.

- ಡಿ.ಲಿಟ್ ಪದವಿಗೆ ನೋಂದಣಿ ರೂ. 20,000/– (ಸಾಮಾನ್ಯ ಅಭ್ಯರ್ಥಿ), ರೂ. 10,000/– (ಪ.ಜಾತಿ/ಪ.ಪಂ) ಗಳನ್ನು ಪ್ರವೇಶಾತಿ ಶುಲ್ಕವಾಗಿ **ಡಿ.ಡಿ.ವಿ.ವಿ ರಶೀದಿ ಚಲನ/ಡಿ.ಡಿ/ NEFT:A/c No.64027069750** ಮೂಲಕ ಪಾವತಿಸಬೇಕು. ಡಿ.ಡಿ ಯನ್ನು **Finance Officer, KSGH Music and Performing Arts University, Mysore.** ಇವರಿಗೆ ಸಲ್ಲುವಂತೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯ ಮೇಲೆ ತೆಗೆಸಿ ಪರೀಕ್ಷಾಂಗ ವಿಭಾಗಕ್ಕೆ ಸಲ್ಲಿಸಿ ನೋಂದಣಿ ಪಡೆದುಕೊಳ್ಳತಕ್ಕದ್ದು. / D.Litt degree registration fee Rs.20,000/- (GM). Rs. 10,000/- (SC/ST) as entrance fee to be paid in the form of D.D. in favour of Finance Officer, KSGH Music and Performing Arts University, Mysore Issued by State Bank of India Submit the D.D. to the Registrar (Evaluation) and get registered.

- ಅಭ್ಯರ್ಥಿಗಳು ಒಮ್ಮೆ ಪಾವತಿಸಿದ ಶುಲ್ಕವನ್ನು ಯಾವ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಈ ಶುಲ್ಕವು ಕಾಲದಿಂದ ಕಾಲಕ್ಕೆ ವಿಶ್ವವಿದ್ಯಾಲಯವು ತೆಗೆದುಕೊಳ್ಳುವ ತೀರ್ಮಾನದಂತೆ ಬದಲಾವಣೆಯಾಗುವುದು. / Candidates fee, once paid will not be returned under any circumstances. Any changes in this fee structure from time will be intimated by the University to the candidate.

### ➢ ಶುಲ್ಕ ಸ್ವರೂಪ : Fee Patterns

### ➢ ಅರ್ಜಿ ಶುಲ್ಕ : Application Fee

| ಕ್ರಸಂ. | ಶುಲ್ಕಗಳು | ಸಾಮಾನ್ಯ ಅಭ್ಯರ್ಥಿ | | ಪ.ಜಾತಿ/ಪ.ಪಂ | |
|---|---|---|---|---|---|
| 1 | ಪ್ರವೇಶ ಶುಲ್ಕ | ರೂ.5000 | ನೋಂದಣಿಗೆ | ರೂ.25,000 | ನೋಂದಣಿಗೆ |
| 2 | ನೋಂದಣಿ ಶುಲ್ಕ | ರೂ.10,000 | ಒಟ್ಟು ರೂ. | ರೂ.5,000 | ಒಟ್ಟು ರೂ. |
| 3 | ಕಮ್ಮಟ ಶುಲ್ಕ | ರೂ.5,000 | 20,000/– | ರೂ.2,500 | 10,000/– |
| 4 | ಮಹಾಪ್ರಬಂಧ ಶುಲ್ಕ | ರೂ.15,000 | | ರೂ.7,500 | |
| 5 | ಮೌಲ್ಯಮಾಪನ ಶುಲ್ಕ | ರೂ.13,000 | | ರೂ.6,500 | |
| 6 | ಘಟಿಕೋತ್ಸವ ಶುಲ್ಕ | ರೂ.2,000 | | ರೂ.1,000 | |
| | ಒಟ್ಟು | **ರೂ.50,000** | | **ರೂ.25,000** | |

| S.N | Fees | GM | | SC/ST | |
|---|---|---|---|---|---|
| 1 | Entrance Fees | Rs.5000 | Total fee for | Rs.25,000 | Total fee for |
| 2 | Registration Fees | Rs.10,000 | registration fee | Rs.5,000 | registration fee |
| 3 | Examination Fees | Rs.5,000 | Rs.20,000/- | Rs.2,500 | Rs.10,000/- |
| 4 | Thesis Fees | Rs.15,000 | | Rs.7,500 | |
| 5 | Evaluation Fee | Rs.13,000 | | Rs.6,500 | |
| 6 | Convocation Fees | Rs.2,000 | | Rs.1,000. | |
| | | **Rs.50,000** | | **Rs.25,000** | |

## ಈ ಇತರೆ ನಿಯಮಗಳು:

- ಅಧ್ಯಯನ ಪ್ರಬಂಧದ ಮೇಲಿನ ಪೂರ್ಣ ಹಕ್ಕು ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯಕ್ಕೆ ಸೇರಿರುತ್ತದೆ. ವಿಶ್ವವಿದ್ಯಾಲಯಕ್ಕೆ ಶುಲ್ಕ ಪಾವತಿಸಿ ಲಿಖಿತ ಒಪ್ಪಿಗೆ ಪಡೆದು ಅಧ್ಯಯನಕಾರರು ಪ್ರಬಂಧವನ್ನು ಬೇರೆಡೆ ಪ್ರಕಟಿಸಬಹುದು. ಪ್ರಕಟಿತ ಪ್ರಬಂಧ 2 ಪ್ರತಿಗಳನ್ನು ವಿಶ್ವವಿದ್ಯಾಲಯದ ಗ್ರಂಥಾಲಯಕ್ಕೆ ಕಡ್ಡಾಯವಾಗಿ ಸಲ್ಲಿಸಬೇಕು. / All rights of Thesis come under govern of KSGH Music and Performing Arts University. After the permission by the university the candidate is eligible to publish the Research work after work payment of prescribed fee and the same two copies of the published are must submit to the university library.

- ಪ್ರಬಂಧದ ಕೃತಚೌರ್ಯಕ್ಕೆ ಸಂಬಂಧಪಟ್ಟಂತೆ ಸಾಕ್ಷ್ಯಾಧಾರ ಸಮೇತ ಯಾರಾದರೂ ದೂರುಗಳನ್ನು ಸಲ್ಲಿಸಿದ್ದಲ್ಲಿ ಅಥವಾ ಪರೀಕ್ಷಕರೇ ಕೃತಿಚೌರ್ಯದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರೆ ಅದನ್ನು ಮಾನ್ಯ ಕುಲಪತಿಗಳು ಸೂಚಿಸಿದಂತಹ ವಿಷಯ ತಜ್ಞರಿಗೆ ಕಳುಹಿಸಿ ಪರಿಶೀಲಿಸಲಾಗುವುದು. / The complaints regarding plagiarism Practice by any other with proof the complaint will be followed by the norms of university under the instructions of the Hon. Vice-Chancellor to the experts for the inspection.

- ಪ್ರಬಂಧದ ಕೃತಚೌರ್ಯವು ದೃಢಪಟ್ಟದ್ದರೆ ಅಭ್ಯರ್ಥಿಗೆ ಕಾರಣ ಕೇಳಿ ನೋಟೀಸ್‌ನ್ನು ನೀಡಲಾಗುವುದು. ಅಭ್ಯರ್ಥಿಯು ನೀಡಿದಂತಹ ಲಿಖಿತ ಕಾರಣಗಳನ್ನು ಸಂಬಂಧ ಪಟ್ಟ ದಾಖಲೆಗಳೊಂದಿಗೆ ಪ್ರಶಾಸನ ಸಭೆಯಲ್ಲಿ ಮಂಡಿಸಿ ಶಿಸ್ತುಕ್ರಮವನ್ನು ಕೈಗೊಳ್ಳಲಾಗುವುದು. / If the plagiarism is detected more than the percentage prescribed by the university the notice will be issued to the candidate to furnish the causes. And the same will be submitted to the Syndicate for further action.

- ಸಾಕ್ಷ್ಯಾಧಾರಗಳಿಲ್ಲದ, ಹೆಸರು, ದಿನಾಂಕ ನಮೂದಿಸಿದ ದೂರುಗಳನ್ನು ಪರಿಗಣಿಸಲಾಗುವುದಿಲ್ಲ. / the complaints without any Proof, Name, Date and Address is not considered.

- ದೂರುದಾರರ ಹೆಸರು ಮುಂತಾದ ವಿವರಗಳನ್ನು ಗೌಪ್ಯವಾಗಿಡುವ ಹೊಣೆ ವಿಶ್ವವಿದ್ಯಾಲದ್ದಾಗಿರುತ್ತದೆ. / The complainers Proof, Name, Date and Address is maintained confidentially in university.

- ನೋಂದಣಿ ಸಂದರ್ಭದಲ್ಲಿ ಈ ನಿಯಮಗಳಿಗೆ ಅಭ್ಯರ್ಥಿಗಳು ತಾವು ಬದ್ಧರೆಂದು ದೃಢೀಕರಣ ಪತ್ರ ಬರೆದು ಕೊಡಬೇಕು. / The Candidate has to give Acceptance Certificate regarding the above mentioned rules and norms of the University.

- ಅಧ್ಯಯನ ಪ್ರಬಂಧವನ್ನು ಕನ್ನಡ ಅಥವಾ ಇಂಗ್ಲೀಷ್‌ನಲ್ಲಿ ಬರೆಯಬಹುದು. / The Thesis can be written in Kannada and English Language.

- ಪ್ರಕಟಿತ ಕೃತಿಗಳನ್ನು ಡಿ.ಲಿಟ್ ಪದವಿಗೆ ಸಲ್ಲಿಸಲು ಅವಕಾಶವಿಲ್ಲ. / Already published work is not entertained to the D.Litt degree.

- ಡಿ.ಲಿಟ್ ಪದವಿಯು ವಿಶ್ವವಿದ್ಯಾಲಯದ ಪಿ.ಹೆಚ್‌ಡಿ ಪದವಿಗೆ ಸಮಾನವಾಗಿರುವುದಿಲ್ಲ. / D.Litt. Degree awarded by the KSGH and Music University is not equivalent to Ph.D. degree.

ಸಹಿ/-

ಕುಲಸಚಿವರು

# ಡಿ.ಲಿಟ್ ಪದವಿ ಶುಲ್ಕ ಸ್ವರೂಪ
# (D.Litt. Degree Fee Patterns)

- ಡಿ.ಲಿಟ್ ಪದವಿಗೆ ನೋಂದಣಿ ರೂ. 20,000/– (ಸಾಮಾನ್ಯ ಅಭ್ಯರ್ಥಿ), ರೂ. 10,000/– (ಪ.ಜಾತಿ/ಪ.ಪಂ) ಗಳನ್ನು ಪ್ರವೇಶಾತಿ ಶುಲ್ಕವಾಗಿ ರಶೀದಿ ಚಲನ/ಡಿ.ಡಿ/ಯನ್ನು **Finance Officer, KSGH Music and Performing Arts University, Mysore.** ಇವರಿಗೆ ಸಲ್ಲುವಂತೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯ ಮೇಲೆ ತೆಗೆಸಿ ಪರೀಕ್ಷಾಂಗ ವಿಭಾಗಕ್ಕೆ ಸಲ್ಲಿಸಿ ನೋಂದಣಿ ಪಡೆದುಕೊಳ್ಳತಕ್ಕದ್ದು. / D.Litt degree registration fee Rs.20,000/- (GM), Rs. 10,000/- (SC/ST) as entrance fee to be paid in the form of D.D. in favour of Finance Officer, KSGH Music and Performing Arts University, Mysore Issued by State Bank of India Submit the D.D. to the Registrar (Evaluation) and get registered.

- ಅಭ್ಯರ್ಥಿಗಳು ಒಮ್ಮೆ ಪಾವತಿಸಿದ ಶುಲ್ಕವನ್ನು ಯಾವ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಈ ಶುಲ್ಕವು ಕಾಲದಿಂದ ಕಾಲಕ್ಕೆ ವಿಶ್ವವಿದ್ಯಾಲಯವು ತೆಗೆದುಕೊಳ್ಳುವ ತೀರ್ಮಾನದಂತೆ ಬದಲಾವಣೆಯಾಗುವುದು. / Candidates fee, once paid will not be returned under any circumstances. Any changes in this fee structure from time to time will be intimated by the University to the candidate.

- ಅರ್ಜಿ ಶುಲ್ಕ : **Application Fee**

| ಕ್ರಸಂ. | ಶುಲ್ಕಗಳು | ಸಾಮಾನ್ಯ ಅಭ್ಯರ್ಥಿ | | ಪ.ಜಾತಿ/ಪ.ಪಂ | |
|---|---|---|---|---|---|
| 1 | ಪ್ರವೇಶ ಶುಲ್ಕ | ರೂ.5000 | ನೋಂದಣಿಗೆ ಒಟ್ಟು ರೂ. 20,000/– | ರೂ.25,000 | ನೋಂದಣಿಗೆ ಒಟ್ಟು ರೂ. 10,000/– |
| 2 | ನೋಂದಣಿ ಶುಲ್ಕ | ರೂ.10,000 | | ರೂ.5,000 | |
| 3 | ಕಮ್ಮಟ ಶುಲ್ಕ | ರೂ.5,000 | | ರೂ.2,500 | |
| 4 | ಮಹಾಪ್ರಬಂಧ ಶುಲ್ಕ | ರೂ.15,000 | | ರೂ.7,500 | |
| 5 | ಮೌಲ್ಯಮಾಪನ ಶುಲ್ಕ | ರೂ.13,000 | | ರೂ.6,500 | |
| 6 | ಘಟಿಕೋತ್ಸವ ಶುಲ್ಕ | ರೂ.2,000 | | ರೂ.1,000 | |
| | ಒಟ್ಟು | **ರೂ.50,000** | | **ರೂ.25,000** | |

| S.N | Fees | GM | | SC/ST | |
|---|---|---|---|---|---|
| 1 | Entrance Fees | Rs.5000 | Total fee for registration fee Rs.20,000/- | Rs.25,000 | Total fee for registration fee Rs.10,000/- |
| 2 | Registration Fees | Rs.10,000 | | Rs.5,000 | |
| 3 | Examination Fees | Rs.5,000 | | Rs.2,500 | |
| 4 | Thesis Fees | Rs.15,000 | | Rs.7,500 | |
| 5 | Evaluation Fee | Rs.13,000 | | Rs.6,500 | |
| 6 | Convocation Fees | Rs.2,000 | | Rs.1,000 | |
| | | **Rs.50,000** | | **Rs.25,000** | |

ಸಹಿ/-
ಕುಲಸಚಿವರು